ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 19–8–2017

# ಪತ್ರಿಕಾ ಆಮಂತ್ರಣ

**1.** ನಮ್ಮ ಬೆಂಗಳೂರು ಹಬ್ಬ
ಸ್ಯಾಂಕಿ ಕೆರೆ

ಉದ್ಘಾಟನೆ:
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು

ದಿನಾಂಕ: 20–8–2017, ಭಾನುವಾರ, ಸಮಯ: ಬೆಳಿಗ್ಗೆ 7.00 ಗಂಟೆಗೆ
ಸ್ಥಳ: ಸ್ಯಾಂಕಿ ಟ್ಯಾಂಕ್, ಅರಮನೆನಗರ ವಾರ್ಡ್, ಸದಾಶಿವನಗರ, ಬೆಂಗಳೂರು

**2.** ಅ) ಡಿ. ದೇವರಾಜ ಅರಸು ಅವರ 102 ನೇ ಜನ್ಮದಿನಾಚರಣೆ:

ಪ್ರತಿಮೆಗೆ ಮಾಲಾರ್ಪಣೆ:
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಹೆಚ್. ಆಂಜನೇಯ,ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ದಿನಾಂಕ: 20–08–2017, ಭಾನುವಾರ, ಸಮಯ: ಬೆಳಿಗ್ಗೆ 10–40 ಗಂಟೆಗೆ
ಸ್ಥಳ: ವಿಧಾನ ಸೌಧ ಪಶ್ಚಿಮ ದ್ವಾರ, ಬೆಂಗಳೂರು.

ಆ) ಸಾರ್ವಜನಿಕ ಸಮಾರಂಭ:

ದೇವರಾಜ ಅರಸು ಪ್ರಶಸ್ತಿ ಪ್ರದಾನ:
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ:
ಹೆಚ್. ಆಂಜನೇಯ,ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ದಿನಾಂಕ: 20-8-2017 ಭಾನುವಾರ ಸಮಯ: ಬೆಳಿಗ್ಗೆ 11-00 ಗಂಟೆಗೆ
ಸ್ಥಳ: ವಿಧಾನ ಸೌಧ, ಬ್ಯಾಂಕ್ವೆಟ್ ಹಾಲ್, ಬೆಂಗಳೂರು

3) ಸಶಸ್ತ್ರ ಪೊಲೀಸ್ ತರಬೇತಿ ಶಾಲೆ 5 ನೇ ತಂಡದ ಸಿವಿಲ್ ಪೊಲೀಸ್
ಕಾನ್ಸ್‌ಟೇಬಲ್ ನಿರ್ಗಮನ ಪಥ ಸಂಚಲನ:

ಮುಖ್ಯ ಅತಿಥಿಗಳು:
ರೂಪಕ್‌ಕುಮಾರ್ ದತ್ತಾ,
ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ

ಉಪಸ್ಥಿತರು:
ಪ್ರೇಮ್ ಶಂಕರ್ ಮೀನಾ, ಪೊಲೀಸ್ ಮಹಾ ನಿರ್ದೇಶಕರು, ತರಬೇತಿ
ಬಿಜಯ್ ಕುಮಾರ್ ಸಿಂಹ, ಪೊಲೀಸ್ ಮಹಾ ನಿರ್ದೇಶಕರು, ತರಬೇತಿ

ದಿನಾಂಕ: 21-8-2017, ಸೋಮವಾರ, ಬೆಳಿಗ್ಗೆ: 9-00 ಗಂಟೆಗೆ
ಸ್ಥಳ: ಪೊಲೀಸ್ ಕವಾಯಿತು ಮೈದಾನ, ಯಲಹಂಕ, ಬೆಂಗಳೂರು

ವಾಹನ ವ್ಯವಸ್ಥೆ: ಈ ಕಾರ್ಯಕ್ರಮಕ್ಕೆ ಮಾಧ್ಯಮದವರನ್ನು ಕರೆದೊಯ್ಯಲು ವಾಹನ ವ್ಯವಸ್ಥೆ ಮಾಡಲಾಗಿದ್ದು ವಾಹನವು ಅಂದು ಬೆಳಿಗ್ಗೆ ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು ಇಲ್ಲಿಂದ ಬೆಳಿಗ್ಗೆ 7.30 ಗಂಟೆಗೆ ನಿಗದಿತ ಸ್ಥಳದತ್ತ ತೆರಳಲಿದೆ.

(ಸಂಪರ್ಕ: ಶ್ರೀ ಹರ್ಷ, ಪೊಲೀಸ್ ಇನ್ಸ್‌ಪೆಕ್ಟರ್ – 96637 59267)

4. ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದಿಂದ ಬೊಮ್ಮನಹಳ್ಳಿ ವಲಯದಲ್ಲಿ

ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಪೌರ ಕಾರ್ಮಿಕರನ್ನು ಕುರಿತು ಭೌತಿಕ ತಪಾಸಣೆ

**ದಿನಾಂಕ: 21-8-2017, ಸೋಮವಾರ, ಬೆಳಿಗ್ಗೆ :11.00 ಗಂಟೆಗೆ**
**ಸ್ಥಳ: ಬೊಮ್ಮನಹಳ್ಳಿ, ಬಿ.ಬಿ.ಎಂ.ಪಿ. ಕಛೇರಿ, ಬೆಂಗಳೂರು**

**5. ಪತ್ರಿಕಾಗೋಷ್ಠಿ:**

ಎಂ.ಆರ್. ಸೀತಾರಾಂ.
ಯೋಜನೆ ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

**ದಿನಾಂಕ: 21-8-2017 ಸೋಮವಾರ ಸಮಯ: 12.00 ಗಂಟೆಗೆ**
**ಸ್ಥಳ: ಕೊಠಡಿ ಸಂಖ್ಯೆ 337, 3 ನೇ ಮಹಡಿ, ವಿಧಾನ ಸೌಧ, ಬೆಂಗಳೂರು**

## ಪತ್ರಿಕಾ ಪ್ರಕಟಣೆ

## ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅತಿ ಹೆಚ್ಚಿನ ಅನುದಾನ ನೀಡಿರುವ ರಾಜ್ಯ ಕರ್ನಾಟಕ – ಸಚಿವ ತನ್ವೀರ್‌ಸೇಠ್

**79/79**

<u>ಬೆಂಗಳೂರು ಆಗಸ್ಟ್ 19(ಕರ್ನಾಟಕ ವಾರ್ತೆ)</u>

ದೇಶದಲ್ಲಿ ಇತರೆ ರಾಜ್ಯಗಳ ಅಲ್ಪಸಂಖ್ಯಾತರ ಕಲ್ಯಾಣಾಭಿವೃದ್ಧಿಗೆ ಸರ್ಕಾರಗಳು ನೀಡುವ ಅನುದಾನಕ್ಕಿಂತ ಕರ್ನಾಟಕ ರಾಜ್ಯ ಸರ್ಕಾರ ಅತಿ ಹೆಚ್ಚಿನ ಅನುದಾನವನ್ನು ನೀಡಿ ಇತರೆ ರಾಜ್ಯಗಳಿಗೆ ಮಾದರಿಯಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ತನ್ವೀರ್ ಸೇಠ್ ಅವರು ಹೇಳಿದರು.

ಇಂದು ನಗರದ ದೇವರಾಜ ಅರಸು ಭವನದಲ್ಲಿ ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಹಮ್ಮಿಕೊಂಡಿದ್ದ ಸ್ವಯಂ ಸೇವಾಸಂಸ್ಥೆಗಳಿಗೆ ನಿಗಮದ ಯೋಜನೆಗಳ ಬಗ್ಗೆ ತರಬೇತುದಾರರಿಗೆ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಅವರು ಇತರ ರಾಜ್ಯಗಳಿಗೆ ಹೋಲಿಸಿದಲ್ಲಿ ಕರ್ನಾಟಕದಲ್ಲಿ ಮಾತ್ರ ಅಲ್ಪಸಂಖ್ಯಾತರಿಗೆ ಅತ್ಯುತ್ತಮ

ಯೋಜನೆಗಳಿದ್ದು ಅವುಗಳ ಸಂಪೂರ್ಣ ಬಳಕೆಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯ ಸ್ವಯಂ ಸೇವಾ ಸಂಸ್ಥೆಗಳಿಂದ ಆಗಬೇಕು.

ಈ ರೀತಿಯ ತರಬೇತಿ ಮತ್ತು ಸಂವಾದಗಳನ್ನು ಹಮ್ಮಿಕೊಳ್ಳುವುದರಿಂದ ಸರ್ಕಾರದ ಯೋಜನೆಗಳಲ್ಲಿರುವ ಸರಿ ತಪ್ಪುಗಳು ಹಾಗೂ ಸಾಮಾನ್ಯ ಜನರಿಗೆ ಅವಶ್ಯವಿರುವ ಯೋಜನೆಗಳನ್ನು ಸರ್ಕಾರದ ಗಮನಕ್ಕೆ ತರಲು ಸಹಾಯಕವಾಗುತ್ತವೆ. ಕೃಷಿ ಮತ್ತು ಕೃಷಿಯೇತರ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಕೃಷಿ ಸಲಕರಣೆಗಳನ್ನು ನೀಡಲು ಸರ್ಕಾರ ಯೋಜಿಸಿದೆ.

ಇತ್ತೀಚೆಗೆ ಸರ್ಕಾರದ ಬಹತೇಕ ಯೋಜನೆಗಳನ್ನು ಪಡೆಯಲು ಆಧಾರ ಜೋಡಣೆ ಕಡ್ಡಾಯವಾಗಿದ್ದು ಅಲ್ಪಸಂಖ್ಯಾತರು ಸರ್ಕಾರದ ಯೋಜನೆಗಳನ್ನು ಪಡೆಯಲು ಆಧಾರ್ ಮತದಾರರ ಗುರುತಿನ ಚೀಟಿಯನ್ನು ಪಡೆಯುವಂತೆ ಸ್ವಯಂಸೇವಾ ಸಂಸ್ಥೆಗಳು ಜನರಲ್ಲಿ ಅರಿವು ಮೂಡಿಸಬೇಕು.

ಅಲ್ಪಸಂಖ್ಯಾತರ ಬಹುತೇಕ ಯೋಜನೆಗಳ ಫಲಾನುಭವಿಗಳ ಹಣವನ್ನು ನೇರವಾಗಿ ಆರ್‌ಟಿಜಿಎಸ್ ಮೂಲಕ ಅವರ ಖಾತೆಗೆ ನೀಡುವುದರಿಂದ ಮಧ್ಯವರ್ತಿಗಳ ಹಾವಳಿ ಇಲ್ಲದಂತಾಗಿದೆ. ಇರುವ ಯೋಜನೆಗಳ ಬಗ್ಗೆ ಹಾಗೂ ಅವುಗಳನ್ನು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕುರಿತ ಕ್ರಮಗಳ ಬಗ್ಗೆ ಅನಕ್ಷರಸ್ಥರಿಗೆ ಸಹಾಯವಾಗುವಂತೆ ಸ್ವಯಂಸೇವಾ ಸಂಸ್ಥೆಗಳು ಅಲ್ಪಸಂಖ್ಯಾತರು ಹೆಚ್ಚಿರುವ ಪ್ರದೇಶಗಳಲ್ಲಿ ತಮ್ಮ ಕಛೇರಿಗಳನ್ನು ತೆರೆದು ಸಹಾಯ ಮಾಡಬೇಕು ಎಂದು ಹೇಳಿದರು.

ಇದೇ ಸಮಯದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಯೋಜನೆಗಳ ಬಗ್ಗೆ ಹೊರತಂದಿರುವ ಪೋಸ್ಟರ್‌ಗಳನ್ನು ಸಚಿವರು ಬಿಡುಗಡೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನಗರಾಭಿವೃದ್ಧಿ ಮತ್ತು ಹಜ್ ಸಚಿವ ಆರ್. ರೋಷನ್‌ಬೇಗ್ ಅವರು ಮಾತನಾಡಿ ಅಲ್ಪಸಂಖ್ಯಾತರ ಅನುದಾನವನ್ನು ಸಮರ್ಪಕ ಬಳಸಲು ಇಂತಹ ಕಾರ್ಯಕ್ರಮದ ಅಗತ್ಯವಿದೆ. ಮುಂದಿನ ದಿನಗಳಲ್ಲಿ ಅಲ್ಪಸಂಖ್ಯಾತರ ಅಡಿಯಲ್ಲಿ ಬರುವ ಎಲ್ಲಾ ಧರ್ಮಗಳ ಮುಖಂಡರ ಸಭೆ ನಡೆಸಿ ಪ್ರತಿ ಧರ್ಮಕ್ಕಿರುವ ಯೋಜನೆಗಳ ಅರಿವು ಮೂಡಿಸಬೇಕು ಎಂದರು.

ಅಲ್ಪಸಂಖ್ಯಾತರು ಹೆಚ್ಚಿರುವ ಪ್ರದೇಶಗಳಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತ ಯೋಜನೆಗಳು ಗಮನಹರಿಸುವುದು ಸೂಕ್ತವಾಗಿದ್ದು ಸ್ವಯಂ ಸೇವಾ ಸಂಸ್ಥೆಗಳು ಇದರ ಬಗ್ಗೆ ಹೆಚ್ಚಿನ ಅಧ್ಯಯನ ಕೈಗೊಳ್ಳಬೇಕು. ಅಲ್ಪಸಂಖ್ಯಾತರ ಅಭಿವೃದ್ಧಿಗೆ ಪ್ರಸ್ತುತ ಸಾಲಿನಲ್ಲಿ 2750 ಕೋಟಿ ರೂ. ಅನುದಾನ ನೀಡಿದ್ದು ಯೋಜನೆಗಳ ವಿವರಗಳು ಜನಸಾಮಾನ್ಯರಿಗೆ ತಲುಪಿದಲ್ಲಿ ಮಾತ್ರ ಅನುದಾನದ ಸದ್ಬಳಕೆ ಸಾಧ್ಯ ಎಂದು ತಿಳಿಸಿದರು.

ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ಮಾತನಾಡಿ ಬಡತನವಿದ್ದರೂ ವಿದ್ಯೆ ಮತ್ತು ಬುದ್ಧಿಗೆ ಪ್ರಶಂಸೆ ಒಂದಲ್ಲ ಒಂದು ದಿನ ಸಿಕ್ಕೆ ಸಿಗುತ್ತದೆ. ಹುಟ್ಟುತ್ತ ಬಡವರಾಗಿರಬಹುದು. ಆದರೆ ಗುರಿ ಇದ್ದಲ್ಲಿ ಶ್ರೀಮಂತರಾಗುವುದು ಅವರವರ ಕೈಯಲ್ಲಿರುತ್ತದೆ. ಸರ್ಕಾರದ ಯೋಜನೆಗಳನ್ನು ಸದ್ಭಳಕೆ ಮಾಡಿಕೊಂಡು ಅಲ್ಪಸಂಖ್ಯಾತರು ಆರ್ಥಿಕ ಅಭಿವೃದ್ಧಿಯತ್ತ ಗಮನಹರಿಸಿ ಶಿಕ್ಷಣವನ್ನು ಲಿಂಗ ತಾರತಮ್ಯವಿಲ್ಲದೆ ಪಡೆಯಬೇಕು ಎಂದು ಹೇಳಿ ನೆರೆದಿದ್ದ ತರಬೇತುದಾರರಿಗೆ ಶುಭ ಕೋರಿದರು.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಅಧ್ಯಕ್ಷ ಎಂ.ಎ. ಗಫೂರ್ ಅವರು ಮಾತನಾಡಿ ನಿಗಮದ ಯೋಜನೆಗಳ ಮಾಹಿತಿ ಹಾಗೂ ಫಲಾನುಭವಿಗಳ ವಿವರ ನೀಡಿದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಎನ್.ಟಿ. ಆಬ್ರೂ ಸ್ವಾಗತಿಸಿದರು ಹಾಗೂ ಆಡಳಿತಾಧಿಕಾರಿ ಸೈಯದ್ ವಜೀರ್ ಅವರು ವಂದನಾರ್ಪಣೆ ಮಾಡಿದರು.

## ನೂತನ ಪ್ರಾದೇಶಿಕ ಸಾರಿಗೆ ಕಚೇರಿ ಉದ್ಘಾಟನೆ

**80/80**

<u>ಬೆಂಗಳೂರು ಆಗಸ್ಟ್ 19(ಕರ್ನಾಟಕ ವಾರ್ತೆ)</u>

ಸಾರಿಗೆ ಇಲಾಖೆಯ ಬಹುತೇಕ ಸೇವೆಗಳು ಇನ್ನು ಮುಂದೆ ಆನ್‌ಲೈನ್ ಮೂಲಕ ಪಡೆಯಬಹುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದರು.

ಅವರು ಬೆಂಗಳೂರಿನ ಕಸ್ತೂರಿ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಉಪ ಸಾರಿಗೆ ಆಯುಕ್ತರು ಹಾಗೂ ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯನ್ನು ಉದ್ಘಾಟಿಸಿ ಮಾತನಾಡಿ ಸಾರಿಗೆ ಇಲಾಖೆಯು ಸರ್ಕಾರಕ್ಕೆ ಹೆಚ್ಚಿನ ರೆವಿನ್ಯೂ ತಂದುಕೊಡುವ ಇಲಾಖೆಗಳಲ್ಲೊಂದಾಗಿದೆ. ಬೆಂಗಳೂರಿನ ಸಾರಿಗೆ ಸೇವೆಯಲ್ಲಿ ದೂರುಗಳು ಬಹಳ ಬರುತ್ತಿದ್ದು ಅದರ ನಿಯಂತ್ರಣಕ್ಕಾಗಿ ಹಲವು ಬದಲಾವಣೆ ತರಲಾಗಿದೆ ಎಂದರು.

ವಾಹನ ನೋಂದಣಿ, ಡ್ರೈವಿಂಗ್ ಲೈಸೆನ್ಸ್ ಆರ್. ಸಿ ಬುಕ್ ವರ್ಗಾವಣೆ, ವಾಹನ ತೆರಿಗೆ ಪಾವತಿ ಮುಂತಾದ ಸೌಲಭ್ಯಗಳನ್ನು ಇನ್ನು ಮುಂದೆ ಆನ್ ಲೈನ್ ಮೂಲಕವೇ ಪಡೆಯಬಹುದಾಗಿದೆ. ಇದಲ್ಲದೆ ಆಧುನಿಕ ಬಸ್ ನಿಲ್ದಾಣ ನಿರ್ಮಾಣವು ಸೇರಿದಂತೆ ಅಗತ್ಯಕ್ಕೆ

ತಕ್ಕಂತೆ ಹೆಚ್ಚುವರಿ ಬಸ್ ಒದಗಿಸಲಾಗುವುದು, ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು ಜಿಲ್ಲಾ ಕೇಂದ್ರಗಳಿಗೂ ವಿಸ್ತರಿಸಲಾಗುವುದು ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರಾದ ಡಿ.ವಿ. ಸದಾನಂದಗೌಡ ಅವರು ಮಾತನಾಡಿ, 1.20 ಕೋಟಿಗೂ ಅಧಿಕ ಜನಸಂಖ್ಯೆ ಹೊಂದಿ ಅತಿ ವೇಗದಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರಕ್ಕೆ ವಿಶೇಷವಾದ ಸೌಲಭ್ಯಗಳ ಅವಶ್ಯಕತೆ ಇದೆ. ನಗರದಲ್ಲಿ ಸರಿ ಸುಮಾರು 69 ಲಕ್ಷಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತಿವೆ. ವಾಹನ ದಟ್ಟಣೆಯಿಂದಾಗಿ ಪ್ರಯಾಣಕ್ಕೆ ಹೆಚ್ಚು ಸಮಯ, ಇಂಧನ ವ್ಯಯಿಸಬೇಕಾಗಿದೆ. ಇದಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಸ್ತೃತ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ.

ಬೃಹತ್ ನಗರಕ್ಕೆ ಮೂಲ ಸೌಲಭ್ಯ ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಕೇಂದ್ರ ಸರ್ಕಾರ ಕೂಡ ನಗರಾಭಿವೃದ್ಧಿಗೆ ತನ್ನ ಪಾಲಿನ ಹಣವನ್ನು ಕಾಲಕಾಲಕ್ಕೆ ಬಿಡುಗಡೆ ಮಾಡುತ್ತಿದೆ. ದೇಶಾದ್ಯಂತ ಆಯ್ದ ನೂರು ನಗರಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸುವ ಯೋಜನೆ ಪ್ರಗತಿಯಲ್ಲಿದೆ, ಸಾರಿಗೆ ಇಲಾಖೆಯ ಸಚಿವರು ಕೋರಿರುವಂತೆ ಡ್ರೈವಿಂಗ್ ಟ್ರಾಕ್ ನಿರ್ಮಾಣಕ್ಕಾಗಿ ಐ.ಟಿ.ಐ. ಸಂಸ್ಥೆಯ 4 ಎಕರೆ ಜಾಗವನ್ನು ಒದಗಿಸಿಕೊಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕೆ.ಆರ್. ಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಿ.ಎ. ಬಸವರಾಜ ಅವರು ಮಾತನಾಡಿ ಬಹುದಿನಗಳಿಂದ ನೆನೆಗುದಿಗೆ ಬಿದ್ದಿದ್ದ ಸಾರಿಗೆ ಕಟ್ಟಡದ ಉದ್ಘಾಟನೆ ಇಂದು ನಡೆಯುತ್ತಿರುವುದು ಸಂತೋಷ ತಂದಿದೆ. ಇದರ ಸದುಪಯೋಗವನ್ನು ಸ್ಥಳೀಯರು ಪಡೆದುಕೊಳ್ಳಬೇಕು.

ಸರ್ಕಾರದಿಂದ ಈ ಕ್ಷೇತ್ರಕ್ಕಾಗಿ ಬಿಡುಗಡೆಯಾದ ಸುಮಾರು 30 ರಿಂದ 40 ಕೋಟಿ ರೂ.ಗಳ ಅನುದಾನದಲ್ಲಿ ಅಂಡರ್ ಪಾಸ್, ಸ್ಕೈವಾಕ್, ಬ್ರಿಡ್ಜ್ ನಿರ್ಮಾಣ ಹೀಗೆ ಅನೇಕ ಕಾರ್ಯಕ್ರಮಗಳು ಅನುಷ್ಠಾನಗೊಂಡಿವೆ. ಇನ್ನು ಹೆಚ್ಚುವರಿಯಾಗಿ 50 ಬಸ್‌ಗಳ ಅವಶ್ಯಕತೆ ಇದ್ದು, ಸದ್ಯದಲ್ಲೇ ಒದಗಿಸುವುದಾಗಿ ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ. ಮುಖ್ಯ ಮಂತ್ರಿಗಳು ಬೆಂಗಳೂರು ನಗರದ ಅಭಿವೃದ್ಧಿ ಯೋಜನೆಗಳಿಗಾಗಿ 11.500 ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡಿರುವುದು ಹೆಮ್ಮೆ ವಿಷಯ ಎಂದರು.

ಪ್ರಾಸ್ತಾವಿಕ ನುಡಿಗಳೊಂದಿಗೆ ಎಲ್ಲರನ್ನು ಸ್ವಾಗತಿಸಿದ ಸಾರಿಗೆ ಆಯುಕ್ತರಾದ ಬಿ. ದಯಾನಂದ ಅವರು ಸಾರಿಗೆ ಇಲಾಖೆಯಲ್ಲಿ ಒಟ್ಟು 61 ಪ್ರಾದೇಶಿಕ ಸಾರಿಗೆ ಕಚೇರಿಗಳಿದ್ದು, ಅವುಗಳಲ್ಲಿ 39 ಕಚೇರಿಗಳು ಸ್ವಂತ ಕಟ್ಟಡ ಹೊಂದಿವೆ. 15 ತನಿಖಾ ಠಾಣೆಗಳಿದ್ದು, ಅವುಗಳಲ್ಲಿ 3 ಠಾಣೆಗಳು ಸ್ವಂತ ಕಟ್ಟಡದಲ್ಲಿ ಕೆಲಸ ಮಾಡುತ್ತಿವೆ. ಬೆಂಗಳೂರು ನಗರದಲ್ಲಿ 11 ಪ್ರಾದೇಶಿಕ ಸಾರಿಗೆ ಕಚೇರಿಗಳಿದ್ದು ಅವುಗಳಲ್ಲಿ 4 ಕಚೇರಿಗಳು ಸ್ವಂತ ಕಟ್ಟಡದಲ್ಲಿವೆ. ಬೆಂಗಳೂರು ಕೇಂದ್ರ ಹಾಗೂ ಯಲಹಂಕ ಪ್ರಾದೇಶಿಕ ಸಾರಿಗೆ ಕಚೇರಿಗಳ ಕಟ್ಟಡ ನಿರ್ಮಾಣ ಪೂರ್ಣಗೊಳ್ಳುತ್ತಿವೆ ಎಂದರು.

ಹಾಲಿ ಬೆಂಗಳೂರು ಪೂರ್ವ ಪ್ರಾದೇಶಿಕ ಸಾರಿಗೆ ಕಚೇರಿಯು 2256 ಚ.ಮೀ. ವಿಸ್ತೀರ್ಣದಲ್ಲಿ 993.84 ಲಕ್ಷ ರೂಗಳಲ್ಲಿ ನಿರ್ಮಾಣವಾಗಿ ಆಯಕಟ್ಟಿನ ಸ್ಥಳದಲ್ಲಿದ್ದು, ರಸ್ತೆ ಮತ್ತು ಮೆಟ್ರೋ ಸಾರಿಗೆ ವ್ಯವಸ್ಥೆಯ ಮೂಲಕ ಸಾರ್ವಜನಿಕರು ಕಚೇರಿಯನ್ನು ಸುಲಭವಾಗಿ ತಲುಪಬಹುದಾಗಿದೆ ಎಂದರು.

## ರಫ್ತು ನಿರ್ವಹಣಾ ತರಬೇತಿಗೆ ಆಹ್ವಾನ

81/81

ಬೆಂಗಳೂರು ಆಗಸ್ಟ್ 19(ಕರ್ನಾಟಕ ವಾರ್ತೆ)

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ 6 ದಿನಗಳ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ಸೆಪ್ಟೆಂಬರ್ 11 ರಿಂದ 16 ರವರೆಗೆ ಬೆಂಗಳೂರಿನಲ್ಲಿ ಆಯೋಜಿಸಲಾಗಿದೆ.

ಕೈಗಾರಿಕೋದ್ಯಮಿಗಳಿಗೆ ಮತ್ತು ಭಾವಿ ರಫ್ತುದಾರರನ್ನು ರಫ್ತು ಕ್ಷೇತ್ರಕ್ಕೆ ಪ್ರವೇಶಿಸಲು ಪ್ರೋತ್ಸಾಹಿಸುವ ಮೂಲಕ ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು ಆಸಕ್ತರು ವಿ.ಟಿ.ಪಿ.ಸಿ. ಕಛೇರಿಯಲ್ಲಿ ನೋಂದಣಿಯನ್ನು ಮಾಡಿಸತಕ್ಕದ್ದು.

ತರಬೇತಿಯನ್ನು ವಿ.ಟಿ.ಪಿ.ಸಿ. ಟ್ರೈನಿಂಗ್ ಹಾಲ್, ಬಿ.ಎಂ.ಟಿ.ಸಿ. ಕಟ್ಟಡ, 'ಎ' ಬ್ಲಾಕ್, 3 ನೇ ಮಹಡಿ, ಕೆ.ಹೆಚ್.ರಸ್ತೆ. ಶಾಂತಿನಗರ, ಬೆಂಗಳೂರು ಇಲ್ಲಿ ನೀಡಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಸಿ.ಎಸ್. ಭಾಸ್ಕರ್, ವಿ.ಟಿ.ಪಿ.ಸಿ. ಇವರನ್ನು ಮೊಬೈಲ್ 9880958218 ವ್ಯವಸ್ಥಾಪಕರ ನಿರ್ದೇಶಕರು, ವಿಶ್ವೇಶ್ವರಯ್ಯ ಕೈಗಾರಿಕಾ ಉತ್ತೇಜನ ಕೇಂದ್ರ, ಬಿ.ಎಂ.ಟಿ.ಸಿ. ಕಟ್ಟಡ, 'ಎ' ಬ್ಲಾಕ್ , 3 ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು –560 027 ದೂರವಾಣಿ: 080–22534444/ 22210644 ಫ್ಯಾಕ್ಸ್ 22210655 ಇ–ಮೇಲ್ vtpckarantaka@gmail.com ವೆಬ್‌ಸೈಟ್ www.vtpckarnataka.gov.in ನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

<u>ಡಿ. ದೇವರಾಜು ಅರಸು ಪ್ರಶಸ್ತಿ ವಿಜೇತ ಮಲ್ಲಿಕಾರ್ಜುನ ಖರ್ಗೆ ಅವರ ಕಿರು ಪರಿಚಯ</u>

## ಸೋಲೇ ಇಲ್ಲದ ನಾಯಕ ಮಲ್ಲಿಕಾರ್ಜುನ ಖರ್ಗೆ

– ಶ್ರೀನಿವಾಸ ಶಿರನೂರಕರ್

<u>ಬೆಂಗಳೂರು ಆಗಸ್ಟ್ 19(ಕರ್ನಾಟಕ ವಾರ್ತೆ)</u>

ಕರ್ನಾಟಕದ ರಾಜಕಾರಣದ ಸಂದರ್ಭದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಅದು ಅವರಿಗೆ ಅಧಿಕಾರದಿಂದ ಬಂದದ್ದಲ್ಲ. ನಿರಂತರ ಪರಿಶ್ರಮ ಮತ್ತು ಬದ್ಧತೆಯಿಂದ ಅದು ಪ್ರಾಪ್ತವಾದದ್ದು.

ಅವರನ್ನು ಸಮಾನವಾಗಿ ಎಲ್ಲರೂ ಗುರುತಿಸುವುದು ಸೋಲೇ ಇಲ್ಲದ ನಾಯಕ ಎಂದು ಅದು ಅವರ ವಿಶಿಷ್ಟ ಗುರುತು ಮತ್ತು ಹೆಗ್ಗಳಿಕೆ. ಹನ್ನೊಂದು ಚುನಾವಣೆಗಳನ್ನು ನಿರಂತರವಾಗಿ ಗೆಲ್ಲುವುದೆಂದರೆ ಸಾಮಾನ್ಯವೇನು? ತಮ್ಮ ಸುಮಾರು ಐದು ದಶಕಗಳ ಸುದೀರ್ಘ ರಾಜಕಾರಣದಲ್ಲಿ ಒಂಭತ್ತು ಬಾರಿ ವಿಧಾನ ಸಭೆಗೆ ಮತ್ತು ಎರಡು ಬಾರಿ ಲೋಕಸಭೆಗೂ ಸತತವಾಗಿ ಆಯ್ಕೆಯಾದ ನಿದರ್ಶನ ಪ್ರಾಯಶ: ಭಾರತದಲ್ಲೇ ಅತಿ ವಿರಳ.

ಎಂಟು ಬಾರಿ ಗುರುಮಿಟ್ಕಲ್ ಕ್ಷೇತ್ರದಿಂದ, ಒಂದು ಬಾರಿ ಚಿತ್ತಾಪುರ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾದರೆ ಎರಡು ಬಾರಿ ಗುಲ್ಬರ್ಗ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದಾರೆ.

ಸದ್ಯ ಅವರು ಅತ್ಯಂತ ಮಹತ್ವದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ. ವಿಶ್ವದ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದ ಪ್ರಜಾಸದನವೆಂದು ಹೆಸರಾದ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರು ಅವರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಾತುಗಳನ್ನು, ವಿಚಾರಗಳನ್ನು ದೇಶದ ಜನತೆ ಅದೆಷ್ಟು ಗಂಭೀರವಾಗಿ ಆಲಿಸುತ್ತಾರೆಯೋ ಖರ್ಗೆ ಅವರ ಮಾತುಗಳನ್ನು, ವಿಚಾರಗಳನ್ನು ಅಷ್ಟೇ ಗಂಭೀರವಾಗಿ ಆಲಿಸುತ್ತಾರೆ.

ವರ್ಷ 1972 ರ ರಾಜ್ಯ ವಿಧಾನ ಸಭೆಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ರಾಜಕೀಯ ಇನ್ನಿಂಗ್ಸ್‌ಅನ್ನು ಆರಂಭಿಸಿದ ಖರ್ಗೆ ಅವರು ಅಂದಿನಿಂದ ಇಂದಿನವರೆಗೂ ಹಿಂತಿರುಗಿ ನೋಡಿಯೇ ಇಲ್ಲ. ಕಲಬುರಗಿ ಜಿಲ್ಲಾ ಮಟ್ಟದಲ್ಲಿ ಶೋಳೂರು ಮಲ್ಲಪ್ಪ ಅವರ ರಾಜಕೀಯ ಗುರುವಾದರೆ ಅವರಿಗೆ ಸುಸ್ಥಿರ ರಾಜಕೀಯ ದೀಕ್ಷೆಯನ್ನು ನೀಡಿದವರು ಹಿಂದುಳಿದ ವರ್ಗಗಳ ಅಪ್ರತಿಮ ನೇತಾರ ಮತ್ತು ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರು. ರಾಜಕಾರಣದ ಮೊಟ್ಟಮೊದಲ ಆಸರೆ ಅತ್ಯಂತ ಮಹತ್ವದ ಪೆಟ್ಟನ್ನು ಕಲಿತಿದ್ದೇ ಅರಸು ಅವರಿಂದ.

ಮೊದಲ ಬಾರಿ ಶಾಸಕರಾದ ಮೇಲೆ ಸಾಮಾಜಿಕ ಮೇಲ್‌ಸ್ತರಕ್ಕೆ ಸೇರಿದ ವಿಶ್ವಮಟ್ಟದ ಕೆಲಸದ ಶಿಫಾರಸ್ಸನ್ನು ತೆಗೆದುಕೊಂಡು ಮುಖ್ಯಮಂತ್ರಿ ಅರಸು ಅವರ ಬಳಿ ಹೋಗಿದ್ದರು. ಅವರು ಅಂದೆ ಆ ಕೆಲಸ ಮಾಡಿಕೊಟ್ಟರು. ಆದರೆ ಒಂದು ಬೋಧನೆಯನ್ನು ಮಾಡಿದರು. ಸಮಾಜದ ಮೇಲ್‌ಸ್ತರದ ಜನಗಳಲ್ಲೇ ವ್ಯಾಪಾರ– ವಹಿವಾಟು ಕೇಂದ್ರೀಕೃತವಾಗಿದ್ದು ಇನ್ನು ಅವರಿಗೆ ರಾಜಕೀಯ ಅಧಿಕಾರವನ್ನು ದೊರಕಿಸಿ ಕೊಟ್ಟರೆ ಅದರಿಂದ ದುರ್ಬಲ ವರ್ಗದವರಿಗೆ ಹೊಡೆತ ಬೀಳುತ್ತವೆ ಎಂಬ ಅರಸು ಅವರ ಬೋಧನೆ ಖರ್ಗೆ ಅವರ ಅಘೋಷಿತ ರಾಜಕೀಯ ಮಂತ್ರವೇ ಆಯಿತು.

ಖರ್ಗೆ ಅವರಲ್ಲಿದ್ದ ಸಾಮಾಜಿಕ ಬದ್ಧತೆ ಮತ್ತು ದಕ್ಷತೆಯನ್ನು ಮನಗಂಡ ಅರಸು ಅವರು 1976 ರಲ್ಲಿ ಅವರನ್ನು ಪ್ರಾಥಮಿಕ ಶಿಕ್ಷಣ ಖಾತೆಯ ರಾಜ್ಯಸಭೆ ಸಚಿವರನ್ನಾಗಿ ಮಾಡಿದರು. ದೊರೆತ ಮೊದಲ ಅವಕಾಶದಲ್ಲೇ ತಮ್ಮ ಅಚ್ಚಳಿಯದ ಛಾಪನ್ನು ಮೂಡಿಸಿದರು. ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ತತ್ವಾದರ್ಶಗಳಿಗೆ ಮಾರುಹೋದ ಖರ್ಗೆ ಅವರು ಹದಿನಾರು ಸಾವಿರ ಪರಿಶಿಷ್ಟ ಜಾತಿ– ಪರಿಶಿಷ್ಟ ಜನಾಂಗದ ಶಿಕ್ಷಕರನ್ನು ಬ್ಯಾಕ್‌ಲಾಗ್ ಆಧಾರದ ಮೇಲೆ ನೇರವಾಗಿ ಭರ್ತಿ ಮಾಡಿ ಒಂದು ಕ್ರಾಂತಿಗೆ ನಾಂದಿ ಹಾಡಿದರು. ಪ.ಜಾ/ಪ.ಪಂ ದವರು ನಡೆಸುವ ಶಿಕ್ಷಣ ಸಂಸ್ಥೆಗಳಿಗೆ ಗ್ರಾಂಟ್ ಇನ್ ಏಡ್ ಸೌಲಭ್ಯಗಳನ್ನು ಕಲ್ಪಿಸಿದರು. ಅವರು ಮಾಡಿದ ಮತ್ತೊಂದು ಕ್ರಾಂತಿ ಎಂದರೆ ಅಂಬೇಡ್ಕರ್ ಅವರ ಭಾವಚಿತ್ರವನ್ನು ಮೊದಲ ಬಾರಿಗೆ ವಿಧಾನಸೌಧದ ತಮ್ಮ  ಕೊಠಡಿಯಲ್ಲಿ ಹಾಕಿದ್ದು ಅದರ ಸಂದೇಶ ಸ್ಪಷ್ಟವಾಗಿತ್ತು.

ಎಪ್ಪತ್ತೈದು ವರ್ಷ ವಯಸ್ಸಿನ ಮಾಪಣ್ಣ ಮಲ್ಲಿಕಾರ್ಜುನ ಖರ್ಗೆ (ಜ. 21.7.1942) ಬೀದರ್ ಜಿಲ್ಲೆಯ ಬಾಲ್ಕಿ ತಾಲೂಕಿನ ವರದಟ್ಟಿಯಲ್ಲಿ ಜನಿಸಿದರು. ಕಲಬುರಗಿಯನ್ನೇ ತಮ್ಮ ಕರ್ಮಭೂಮಿಯನ್ನಾಗಿ ಮಾಡಿಕೊಂಡರು. ಕೇವಲ ದಕ್ಷತೆ ಮತ್ತು ಪರಿಶ್ರಮದ ಆಧಾರದ ಮೇಲೆ ಅವರು ದೇವರಾಜ ಅರಸ್, ಆರ್. ಗಂಡೂರಾವ್,  ಎಸ್. ಬಂಗಾರಪ್ಪ, ಎಂ. ವೀರಪ್ಪ ಮೊಯ್ಲಿ, ಎಸ್. ಎಂ. ಕೃಷ್ಣ ಮತ್ತು ಧರ್ಮಸಿಂಗ್ ಅವರ ಸರಕಾರಗಳಲ್ಲಿ ಶಿಕ್ಷಣ, ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಸಹಕಾರ, ಕೈಗಾರಿಕೆ, ಗೃಹ, ಸಾರಿಗೆ, ಜಲಸಂಪನ್ಮೂಲ ಇತ್ಯಾದಿ ಖಾತೆಗಳನ್ನು ಲೀಲಾಜಾಲವಾಗಿ ನಿರ್ವಹಿಸಿದ್ದಾರೆ. ಕಂದಾಯ ಸಚಿವರಾದಾಗ ಸುಮಾರು 400 ಭೂನ್ಯಾಯ ಮಂಡಳಿಗಳನ್ನು ರಚಿಸಿ ಸಾವಿರಾರು ಎಕರೆ ಹೆಚ್ಚುವರಿ ಭೂಮಿಯನ್ನು ಭೂರಹಿತ ಕಾರ್ಮಿಕರಿಗೆ ನೀಡಿದ್ದು ಅವರ ಮತ್ತೊಂದು ಗಮನಾರ್ಹ ಸಾಧನೆ. ವಿಧಾನ ಸಭೆಯಲ್ಲಿ ಎರಡುಬಾರಿ ವಿರೋಧ ಪಕ್ಷದ ನಾಯಕರಾಗಿ ಅನೇಕಬಾರಿ ಸರ್ಕಾರವನ್ನು ಪೇಚಿಗೆ ಸಿಲುಕಿಸಿದ್ದಾರೆ.

ಅಂಬೇಡ್ಕರ್ ಅವರು ಕೇವಲ ದಲಿತ ಜನಾಂಗದ ನಾಯಕರಾಗದೆ ಅವರು ಇಡೀ ದೇಶದ ನಾಯಕರಾಗಿದ್ದು ಅವರ ತತ್ವಾದರ್ಶಗಳನ್ನು ಅಕ್ಷರಶಃ ಮತ್ತು ತತ್ವಶಃ ಪಾಲಿಸಬೇಕೆಂಬ

ಹವಣಿಕೆಯ ಖರ್ಗೆ ಅವರು ತಮಗೆ ದೊರೆತ ರಾಜಕೀಯ ಅಧಿಕಾರದ ಅವಕಾಶಗಳನ್ನು ಅದಕ್ಕಾಗಿಯೇ ವಿನಿಯೋಗಿಸಿಕೊಂಡರು.

ಪಕ್ಷಾತೀತವಾಗಿ ಹೇಳುವುದಾದರೆ, ಸಮಕಾಲೀನ ರಾಜಕಾರಣದ ಸಂದರ್ಭದಲ್ಲಿ ಖರ್ಗೆ ಅವರನ್ನು ನುರಿತ, ಅರಿತ, ಬುದ್ಧಿವಂತ ಮತ್ತು ಬದ್ಧತೆಯುಳ್ಳ ಮುತ್ಸದ್ದಿತನದ ರಾಜಕೀಯ, ಸಂಸದೀಯ ಪಟು ಬೇರೊಬ್ಬರಿಲ್ಲಾ ಎಂದು ಹೇಳಿದರೆ ಖಂಡಿತ ಅತಿಶಯೋಕ್ತಿ ಆಗಲಾರದು.

ಸಿದ್ದಾರ್ಥ ವಿಹಾರ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾಗಿ ಕಲಬುರಗಿಯಲ್ಲಿ ಅವರು ನಿರ್ಮಿಸಿರುವ ಅತ್ಯಂತ ಭವ್ಯವಾದ ಬುದ್ಧವಿಹಾರ ಅವರ ಅದಮ್ಯ ಕರ್ತೃತ್ವಶಾಲಿ ಗುಣಕ್ಕೆ ಜ್ವಲಂತ ನಿದರ್ಶನವಾಗಿದೆ.

ಶ್ರೀಮತಿ ರಾಧಾ ಬಾಯಿ ಅವರನ್ನು ಮದುವೆ ಆಗಿರುವ ಖರ್ಗೆ ದಂಪತಿಗಳಿಗೆ ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರು. ಪುತ್ರ ಪ್ರಿಯಾಂಕ ಖರ್ಗೆ ಚಿತಾಪುರದಿಂದ ಕಳೆದ ಬಾರಿ ಆಯ್ಕೆಯಾಗಿದ್ದು ಸದ್ಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಪ್ರವಾಸೋದ್ಯಮ ಖಾತೆಯ ರಾಜ್ಯ ಸಚಿವರಾಗಿದ್ದಾರೆ.

(ಶ್ರೀನಿವಾಸ ಶಿರನೂರಕರ್ ಅವರು ಕಲಬುರಗಿಯ ಹಿರಿಯ ಪತ್ರಕರ್ತರು)